72. ~~9-72-~~ (143)

9-72-(72)

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ನಿಯಮ 72ರ ಮೇರೆಗೆ ಗಮನ ಸೆಳೆದ ಸೂಚನೆಗೆ ಉತ್ತರ

**ವಿಷಯ:**

ಸರ್ಕಾರಿ ಹಾಗೂ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ, ಬೋಧಕೇತರ ಸಿಬ್ಬಂದಿಗಳ ಬಟವಾಡೆ ಸಂಬಂಧ ಖಜಾನೆ-1 ರಿಂದ ಖಜಾನೆ-2ಕ್ಕೆ ಮಾರ್ಪಾಡು ಮಾಡುತ್ತಿರುವುದರಿಂದಾಗಿ ಹಲವು ತಿಂಗಳುಗಳಿಂದ ಸಕಾಲಕ್ಕೆ ಸಂಬಳ ಆಗದೆ ಆರ್ಥಿಕ ನಷ್ಟದಲ್ಲಿರುವ ಗಂಭೀರ ಸಮಸ್ಯೆ ಕುರಿತು.

**ಉತ್ತರ:**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಡಿ ಬರುವ ಸರ್ಕಾರಿ ಹಾಗೂ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ, ಬೋಧಕೇತರ ಸಿಬ್ಬಂದಿಗಳ ವೇತನವನ್ನು ಈ ಸಾಲಿನಲ್ಲಿ ಖಜಾನೆ-2 ವ್ಯವಸ್ಥೆಯಡಿ ಪಾವತಿಗೆ ಕ್ರಮ ಕೈಗೊಳ್ಳಲಾಗಿದ್ದು, ಪ್ರಾರಂಭಿಕ ಮಾಹೆಗಳಲ್ಲಿ ತಾಂತ್ರಿಕ ಮಾರ್ಪಾಡುಗಳು, ಇಂದೀಕರಣ, ಆಯವ್ಯಯ ಮರುಹೊಂದಾಣಿಕೆ ಹಾಗೂ ಇತರೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಕಾರಣಗಳಿಂದ ಪ್ರಾರಂಭದಲ್ಲಿ ವೇತನ ಬಟವಾಡೆ ವಿಳಂಬವಾಗಿದ್ದು, ನಂತರದ ಮಾಹೆಗಳಲ್ಲಿ ಸರಿಯಾಗಿ ವೇತನ ಪಾವತಿಯಾಗುತ್ತಿದೆ.

ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ವ್ಯಾಪ್ತಿಯಲ್ಲಿ ವೇತನ ಪಡೆಯುತ್ತಿರುವ ಶಿಕ್ಷಕರ ಮತ್ತು ಸಿಬ್ಬಂದಿಗಳ ವೇತನವನ್ನು ಸಹ ಈ ಸಾಲಿನಲ್ಲಿ ಖಜಾನೆ-2 ವ್ಯವಸ್ಥೆಯಡಿ ತರಲಾಗಿದೆ. ಶಿಕ್ಷಕರ ಬ್ಯಾಂಕ್ ವಿವರಗಳನ್ನು, ಖಜಾನೆ-1 ರಿಂದ ಖಜಾನೆ-2 ತಂತ್ರಾಂಶಕ್ಕೆ ವರ್ಗಾಯಿಸುವ ಹಂತದಲ್ಲಿ ಕೆಲವು ತಾಂತ್ರಿಕ ಅಡಚಣೆಗಳು ಉಂಟಾಗಿದ್ದರಿಂದ ಅವುಗಳ ನಿವಾರಣೆಗೆ ಸಮಯ ಬೇಕಾಗಿದ್ದರಿಂದ ವಿಳಂಬವಾಗಿರುತ್ತದೆ. ಅಲ್ಲದೆ, ಜಿಲ್ಲಾ ಪಂಚಾಯತ್ ಹಂತದಲ್ಲಿ ಹಾಗೂ ತಾಲ್ಲೂಕು ಪಂಚಾಯತ್ ಹಂತದಲ್ಲಿ ಬಿಲ್ಲುಗಳ ತಯಾರಿಕೆ ಹಾಗೂ ಮೇಲುಸಹಿ ಮಾಡಬೇಕಾಗಿತ್ತು. ಹೊಸದಾಗಿ ಎಲ್ಲಾ ಹಂತದ ಪ್ರಾಧಿಕಾರಿಗಳ

ವಿವರವನ್ನು ನೂತನ ಖಜಾನೆ-2 ತಂತ್ರಾಂಶದಲ್ಲಿ ಅಳವಡಿಸಿ ಅನುಮತಿಗಳನ್ನು ಪಡೆದು ಮುಂದುವರಿಯಬೇಕಾಗಿತ್ತು.

ಇದಲ್ಲದೆ, 2019-20ನೇ ಸಾಲಿನ ಅನುದಾನದಲ್ಲಿ 2018-19ನೇ ಸಾಲಿನ ವೇತನ ಬಾಕಿಗಳನ್ನು ಕೂಡಾ ಡ್ರಾ ಮಾಡಿದ್ದರಿಂದ ಅನುದಾನ ಕೊರತೆ ಉಂಟಾಗಿದ್ದು, ಹೆಚ್ಚುವರಿ ಅನುದಾನ ಒದಗಿಸುವ ಮೂಲಕ ಸರಿಪಡಿಸಿದೆ.

ಪ್ರಸ್ತುತ ಆರ್ಥಿಕ ಇಲಾಖೆಯಿಂದ ತಾಲ್ಲೂಕು ಪಂಚಾಯತಿಗಳಿಗೆ ಶಿಕ್ಷಕರ ವೇತನಾನುದಾನವನ್ನು ನೇರವಾಗಿ ಬಿಡುಗಡೆ ಮಾಡಲಾಗುತ್ತಿದೆ. ಒಂದು ಜಿಲ್ಲೆಯ ವ್ಯಾಪ್ತಿಯಲ್ಲಿ ಒಂದು ತಾಲ್ಲೂಕು ಪಂಚಾಯತಿಯಲ್ಲಿ ಹೆಚ್ಚುವರಿಯಾದ ವೇತನಾನುದಾನವನ್ನು, ವೇತನಾನುದಾನದ ಕೊರತೆ ಇರುವ ಮತ್ತೊಂದು ತಾಲ್ಲೂಕು ಪಂಚಾಯತಿಗೆ ಮರುಹೊಂದಾಣಿಕೆ ಮಾಡಲು ಸಹ ಸಾಧ್ಯವಾಗದ ಕಾರಣ ವಿಳಂಬಕ್ಕೆ ಆಸ್ಪದವಾಯಿತು. ಈ ತೊಂದರೆಯನ್ನು ಪರಿಹರಿಸಲು ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿ ತೀರ್ಮಾನಿಸಿದಂತೆ, 2020-21ನೇ ಸಾಲಿನಲ್ಲಿ ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆ ಮಾಡುವ ವೇತನಾನುದಾನವನ್ನು ಒಟ್ಟಾರೆಯಾಗಿ ಜಿಲ್ಲಾ ಪಂಚಾಯತಿಗಳಿಗೆ ಅನುದಾನ ಬಿಡುಗಡೆ ಮಾಡಿ ಜಿಲ್ಲಾ ಪಂಚಾಯತಿಗಳು ನಂತರ ಸಂಬಂಧಿಸಿದ ತಾಲ್ಲೂಕು ಪಂಚಾಯತಿಗಳಿಗೆ ವಾಸ್ತವಿಕ ಬೇಡಿಕೆಗೆ ಅನುಗುಣವಾಗಿ ವೇತನಾನುದಾನವನ್ನು ಮರುಹಂಚಿಕೆ ಮಾಡಲು ಆರ್ಥಿಕ ಇಲಾಖೆಯಿಂದ ಕ್ರಮವಹಿಸಲಾಗುತ್ತಿದೆ ಹಾಗೂ ಬಹುತೇಕ ತಾಂತ್ರಿಕ ಅಡಚಣೆಗಳನ್ನು ನಿವಾರಿಸಿರುವುದರಿಂದ ಇನ್ನು ಮುಂದೆ ವೇತನಾನುದಾನದ ಕೊರತೆ ಉದ್ಭವಿಸದಂತೆ ಕ್ರಮವಹಿಸಿ ಸಕಾಲದಲ್ಲಿ ವೇತನ ಪಾವತಿಸಲು ಅನುಕೂಲವಾಗುತ್ತದೆ.

ಇಪಿ 61 ಯೋಯೋಕ 2020

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು